**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲ್ಯು :10 ಸಿಡಬ್ಲ್ಯು :22

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಮಹಾಂತೇಶ ಗೊಳಸಂಗಿ |
| ತಂದೆಯ ಹೆಸರು | : | ಶ್ರೀ.ಬಾಪುರಾವ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 16-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2017 ರಿಂದ 2022 ರವರೆಗೆ ನಾನು ಮುಗಳಖೋಡ ಪುರಸಭೆಯ ಸದಸ್ಯನಾಗಿದ್ದೇನು ಮತ್ತು 2017 ರಿಂದ ಎರಡೂವರೆ ವರ್ಷಗಳವರೆಗೆ ನಾನು ಮುಗಳಖೋಡ ಪುರಸಭೆಯ ಅಧ್ಯಕ್ಷನಾಗಿದ್ದೇನು.

2. ಕಾಶಿಲಿಂಗ ಕಿಲಾರೆ ಅವರು ಮುಖ್ಯಾಧಿಕಾರಿಯಾಗಿ ಕಂಕಣವಾಡಿ ಪಟ್ಟಣ ಪಂಚಾಯತಿಯಲ್ಲಿದ್ದು, ಮುಗಳಖೋಡ ಪುರಸಭೆಗೆ ಪ್ರಭಾರಿಯಾಗಿ ಬರುತ್ತಿದ್ದರು. ಚಾಸಾಃ21 ಸತ್ಯನಾರಾಯಣರಾವ್ ಅವರು ಆ ನಂತರದಲ್ಲಿ ಮುಖ್ಯ ಆಡಳಿತ ಅಧಿಕಾರಿಯಾಗಿ ನೇಮಕಗೊಂಡರು. ಮುಗಳಖೋಡ ಗ್ರಾಮದ ಯಲ್ಲಮ್ಮದೇವಿ ಪಾದುಕಟ್ಟೆ ಹತ್ತಿರ ಇರುವ ಖುಲ್ಲಾ ಜಾಗದ ವಿಚಾರವಾಗಿ ಏನು ತಕರಾರು ಇತ್ತು ಎಂದು

ನನಗೆ ಗೊತ್ತಿಲ್ಲ, ಆದರೆ ಆ ಖುಲ್ಲಾ ಜಾಗ ನಮಗೆ ಸೇರಬೇಕು ಎಂದು ಮಾದರ ಸಮಾಜದವರು ಮತ್ತು ಜೈನ ಸಮಾಜದವರು ತಕರಾರು ಮಾಡುತ್ತಿದ್ದರು. ಈ ತಕರಾರು ನಾನು ಪುರಸಭೆ ಅಧ್ಯಕ್ಷನಾಗಿದ್ದಾಗ ನನ್ನ ಗಮನದಲ್ಲಿ ಇರಲಿಲ್ಲ.

3. 2018 ನೇ ಇಸವಿಯಲ್ಲಿ ನನಗೆ ದಿನಾಂಕ ನೆನಪಿರುವುದಿಲ್ಲ, ಚಾಸಾಃ 21 ರವರು ನನಗೆ ಪೋನ ಮಾಡಿ ಬಾಬನ್ನ ಅವರಿಗೂ, ಮಾದರ ಸಮಾಜದವರಿಗೂ ಗಲಾಟೆ ಆಗುತ್ತಿದೆ ನೀವು ಮುನ್ಸಿಪಾಲ್ಟಿಗೆ ಬನ್ನಿ ಎಂದು ಬೆಳಗ್ಗೆ 10:30 ಗಂಟೆಗೆ ಕರೆದರು. ನಾನು ಸುಮಾರು 10-20 ನಿಮಿಷಗಳ ನಂತರದಲ್ಲಿ ನಾನು ಕಚೇರಿಗೆ ಹೋಗಿದ್ದೇನು. ಆಗ ಅವರು ಜಗಳದ ಬಗ್ಗೆ ನನಗೆ ವಿಚಾರಿಸಿದರು, ನನಗೆ ಗೊತ್ತಿಲ್ಲ ಎಂದು ಹೇಳಿ ಕಚೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ತೆಗೆದುಕೊಂಡು ಹೋಗಿ ಎಂದು ಹೇಳಿದ್ದೇನು. ನಾನು, ಚಾಸಾಃ 21, ಚಾಸಾಃ 18 ಯಮನಪ್ಪ ದೇವನ್ನವರ, ಚಾಸಾಃ 20 ಲಕ್ಷ್ಮೇಶ್ವರ ರವರು ವಿವಾದಿತ ಸ್ಥಳಕ್ಕೆ ಬೆಳಗ್ಗೆ 11:30 ಕ್ಕೆ ಹೋಗಿದ್ದೇವು. ಚಾಸಾಃ 21 ರವರು ಕಚೇರಿಯಲ್ಲಿನ ದಾಖಲೆಗಳನ್ನು ಎರಡೂ ಸಮಾಜದವರಿಗೆ ತೋರಿಸುತ್ತಿದ್ದರು, ಅಷ್ಟರಲ್ಲಿ ಎರಡೂ ಸಮಾಜದವರಿಗೆ ಗಲಾಟೆ ಆಯಿತು. ವಿವಾದಿತ ಸ್ಥಳದ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ.

4. ವಿವಾದಿತ ಸ್ಥಳವು ಗ್ರಾಮಠಾಣಾಗೆ ಸೇರಿದ್ದು ಎಂದು ತಹಶೀಲ್ದಾರವರು ಹೇಳಿದರು. ನಾವು ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ಆರೋಪಿತರು ಕಟ್ಟಡ ಕಟ್ಟುವ ಕೆಲಸ ಪ್ರಾರಂಭಿಸಿದ್ದರು. ಕಾಶಿಲಿಂಗ ಕಿಲಾರೆ ಅವರು ಆರೋಪಿತರಿಗೆ ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಲು ಅನುಮತಿ ನೀಡಿದ್ದರು ಎಂದು ನನಗೆ ತಿಳಿದಿರುತ್ತದೆ. ಆ ರೀತಿ ಅನುಮತಿ ನೀಡಿದ 4-5 ದಿನಗಳ ನಂತರ ಅನುಮತಿಯನ್ನು ರದ್ದು ಮಾಡಿರುತ್ತಾರೆ ಎಂದು ತಿಳಿದಿರುತ್ತದೆ. ಘಟನೆಯ ಬಗ್ಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**<u>ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ ಹಾಗೂ 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.